**ಸಾಕ್ಷಿಗೆ ದಿನಾಂಕಃ 29.01.2026 ರಂದು ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲುಃ ಶ್ರೀ. ಎಂ.ಡಿ. ವಕೀಲರಿಂದಃ</u>**

ನಾನು 4 ನೇ ತರಗತಿವರೆಗೆ ಓದಿರುತ್ತೇನೆ. ಸಹಿ ಮಾಡಲು ಹೊರತುಡಿಸಿ ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ವಾದಿಯು ನನಗೆ ಹೆಂಡತಿ ಆಗಬೇಕು. ವಾದಿಗೆ 40 ವರ್ಷ ಆಗಿರುತ್ತದೆ. ವಾದಿಗೆ ಮಂಡಿ ನೋವಿನ ಸಮಸ್ಯೆ ನಡೆಯಲು ಆಗುವುದಿಲ್ಲ. ಈ ಸಂಬಂಧ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತು ವಾದಿಗೆ ನನ್ನಿಂದ ವರ್ಗಾವಣೆ ಆಗಿರುತ್ತದೆ. ಈ ಸಂಬಂಧ ಯಾವುದೇ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಮನೆಯನ್ನು ನಿರ್ಮಿಸುವ ಸಲುವಾಗಿ ನನ್ನ ಹೆಂಡತಿಯ ಹೆಸರಿಗೆ ಖಾತೆಯನ್ನು ಬದಲಾವಣೆಯನ್ನು 15 ವರ್ಷದ ಹಿಂದೆ ಮಾಡಿಸಿರುತ್ತೇನೆ. ಅಸೆಸ್ ಮೆಂಟ್ ದಾಖಲೆಯ ಆಧಾರದ ಮೇಲೆ ಖಾತೆ ಬದಲಾವಣೆ ಆಗಿರುತ್ತದೆ. ಅದಕ್ಕೂ ಮೊದಲು ನನ್ನ ಹೆಸರಿನಲ್ಲಿ ಇತ್ತು. 25 ವರ್ಷದ ಹಿಂದೆ ನನ್ನ ಹೆಸರಿಗೆ ಖಾತೆ ಆಗಿರುತ್ತದೆ. ಈ ಸಂಬಂಧ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಪಂಚಾಯಿತಿಯವರು ಖಾತೆಯನ್ನು ನನ್ನ ಹೆಸರಿಗೆ ಕಿಮ್ಮತ್ತು ಆಧಾರದ ಮೇಲೆ ವರ್ಗಾಯಿಸಿರುತ್ತಾರೆ. ಪಂಚಾಯಿತಿಯವರು ನನ್ನಿಂದ ಹಣವನ್ನು ಪಡೆದು ಖಾತೆ ಮಾಡಿಕೊಟ್ಟಿರುತ್ತಾರೆ. ಈ ಸಂಬಂಧ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ರೂ.750/ ಕಿಮ್ಮತ್ತನ್ನು ಪಾವತಿ ಮಾಡಿರುತ್ತೇನೆ. ದಾವಾ ಸ್ವತ್ತು ಮೂಲತಃ ಪಂಚಾಯಿತಿಗೆ ಸೇರಿದ್ದು ಎಂದು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಈ ವಿಚಾರವನ್ನು ದಾವಾ ಪತ್ರದಲ್ಲಿ ತಿಳಿಸಿರುವುದಿಲ್ಲ.

ದಾವಾ ಸ್ವತ್ತು ಮೂಲತಃ ನಮ್ಮ ಪೂರ್ವಿಕರಿಗೆ ಸೇರಿರುವುದಿಲ್ಲ. ಪಂಚಾಯಿತಿಯವರು ನೋಂದಾಯಿತ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ದಾವಾ ಸ್ವತ್ತು ಪಂಚಾಯಿತಿಗೆ ಸೇರಿದ್ದು ಎಂದು ಹಾಗೂ ಅವರು ನಮಗೆ ನೋಂದಾಯಿತ ಪತ್ರವನ್ನು ಬರೆದುಕೊಟ್ಟರು ಎಂದು ಯಾವುದೇ ದಾಖಲೆ ಇರುವುದಿಲ್ಲ. ಸುಮಾರು 25 ವರ್ಷದಿಂದಲೂ ನನ್ನ ಹೆಸರಿಗೆ ಖಾತೆ ಬಂದಿರುತ್ತದೆ. ಈ ಸಂಬಂಧ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಿ.ಪಿ.1 ಮತ್ತು 2 ನ್ನು ಹೊರತುಪಡಿಸಿ ಬೇರೆ ದಾಖಲೆಗಳು ಇರುವುದಿಲ್ಲ. ನಿ.ಪಿ.1 2013-14 ನೇ ಸಾಲಿಗೆ ಸೇರಿದ್ದು ಎಂದರೆ ಸರಿ. ನಿ.ಪಿ.2 ಪ್ರಕಾರ 2013-14 ನೇ ಸಾಲಿನಲ್ಲಿ ನನ್ನ ಹೆಂಡತಿಯ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ನಿ.ಪಿ.1 ಮತ್ತು 2 ರ ಹಿಂದಿನ ಸಾಲಿನ ಡಿಮ್ಯಾಂಡ್ ದಾಖಲೆಯನ್ನು

ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಿ.ಪಿ.1 ಮತ್ತು 2 ರಲ್ಲಿ ಕಿಮ್ಮತ್ತನ್ನು ಪಡೆದು ಖಾತೆ ವರ್ಗಾಯಿಸಿದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಿ.ಪಿ.1 ಮತ್ತು 2 ನ್ನು ಪಿ.ಡಿ.ಓ.ರವರು ನೀಡಿದ್ದು ಯಾರು ಬರೆದರು ಎಂದು ನನಗೆ ನೆನಪಿಲ್ಲ. ನಿ.ಪಿ.1 ಮತ್ತು 2 ರ ದೃಡೀಕೃತ ನಕಲನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ.

ದಾವಾ ಸ್ವತ್ತು ಪಂಚಾಯಿತಿ ಹಾಗೂ ನನಗೆ ಸೇರಿದ ಸ್ವತ್ತು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.1 ಮತ್ತು 2 ನ್ನು ಈ ಕೇಸಿಗಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.1 ಮತ್ತು 2 ನ್ನು ಹೊರತುಪಡಿಸಿ ದಾವಾ ಸ್ವತ್ತಿನ ಮಾಲಿಕತ್ವವನ್ನು ತೋರಿಸಲು ಬೇರೆ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಉತ್ತರಕ್ಕೆ ನಮೂದು ಮಾಡಿರುವ ಮನಿಯನಾಯಕನ ಮನೆ ಎಂದರೆ ಪ್ರತಿವಾದಿಗಳ ಮನೆ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸಲು ನಾನೇ ಮಾಹಿತಿ ನೀಡಿರುತ್ತೇನೆ. 1 ನೇ ಪ್ರತಿವಾದಿಯ ಹೆಸರನ್ನು ಮಹದೇವಮ್ಮ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸುವಾಗ ಅವರಿಗೆ ಸುಮಾರು 60 ವರ್ಷ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯನ್ನು ಮನಿಯ ಉರುಫ್ ಮನಿಯನಾಯಕ ಎಂದು ಕರೆಯುತ್ತಾರೆ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸುವಾಗ ಅವರಿಗೆ ಸುಮಾರು 58 ವರ್ಷ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. ಪ್ರತಿವಾದಿಗಳ ವಯಸ್ಸನ್ನು ಊಹೆ ಆಧಾರದ ಮೇಲೆ ಹೇಳಿರುತ್ತೇನೆ ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡನ ಹೆಸರು ಶಂಭುಲಿಂಗಯ್ಯ ಅಲಿಯಾಸ್ ಶಂಭುಲಿಂಗನಾಯಕ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಗಂಡ, 2 ನೆ ಪ್ರತಿವಾದಿ ಹಾಗೂ ಮಹದೇವ ಮತ್ತು ಪುಟ್ಟರಾಚಯ್ಯ ಸಹೋದರರು ಎಂದರೆ ನನಗೆ ಗೊತ್ತಿಲ್ಲ. ನಾನು 1 ನೇ ಪ್ರತಿವಾದಿಯ ಗಂಡ ಮತ್ತು 2 ನೇ ಪ್ರತಿವಾದಿಯನ್ನು ಮಾತ್ರ ನೋಡಿರುತ್ತೇನೆ.

ನಾನು 51 ವರ್ಷದಿಂದಲೂ ಮೂಗೂರಿನಲ್ಲಿ ವಾಸವಿರುತ್ತೇನೆ. ಮೇಲೆ ಹೇಳಿದ 4 ಜನ ಸಹೋದರರ ತಂದೆ ಮನಿಯನ ಲಿಂಗಯ್ಯ ಎಂದರೆ ನನಗೆ ಗೊತ್ತಿಲ್ಲ. ದಿ.25.11.1971 ರಂದು ಮನಿಯನ ಲಿಂಗಯ್ಯ ರವರ ನಡುವೆ ಪ್ರತಿವಾದಿಗಳು ವಾಸ ಮಾಡುವ ಮನೆ ದಾವಾ ಸ್ವತ್ತು ಪಂಚಾಯಿತಿ ಪಾರಿಕತ್ತು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಮನೆಯ ದಕ್ಷಿಣಭಾಗದಲ್ಲಿ ದಾವಾ ಸ್ವತ್ತು ಬರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ರಸ್ತೆ ಬರುತ್ತದೆ ಎಂದರೆ ಸರಿ. ಪ್ದರತಿವಾದಿಗಳು ವಾಸ ಮಾಡುವ ಮನೆ ನಾಡ ಹೆಂಚಿನ ತೊಟ್ಟಿಮನೆ ಎಂದರೆ ಸರಿ. ಸದರಿ ಮನೆಯು

ದಿ.25.11.1971 ರ ವಿಭಾಗದ ಮೂಲಕ 4 ಜನ ಸಹೋದರರಿಗೂ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ತಲಾ ಎರಡೂವರೆ ಅಂಕಣ ವಿಭಾಗ ಮಾಡಿಕೊಂಡು ವಾಸವಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಹದೇವನಾಯಕ ಮದುವೆ ಆದ ಮೇಲೆ ತೀರಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಅವರ ಹೆಂಡತಿ ಎಸ್.ಮೇಗಡಹಳ್ಳಿಯಲ್ಲಿ ವಾಸವಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಸಹೋದರ ಪುಟ್ಟರಾಚಯ್ಯ ಮದುವೆ ಆಗದೆ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಉತ್ತರ ಭಾಗದಲ್ಲಿರುವ ಮನೆಯಲ್ಲಿ ಪ್ರತಿವಾದಿಗಳು ವಾಸವಿರುತ್ತಾರೆ ಎಂದರೆ ಸರಿ. ಸದರಿ ಮನೆಯ ಪೂರ್ವ ಭಾಗದಲ್ಲಿ 2 ಮತ್ತು 3 ನೇ ಪ್ರತಿವಾದಿಗಳು ಮತ್ತು ಪಶ್ಚಿಮ ಭಾಗದಲ್ಲಿ 1 ನೇ ಪ್ರತಿವಾದಿ ವಾಸವಿರುತ್ತಾರೆ ಎಂದರೆ ಸರಿ. ವಿಭಾಗ ಪತ್ರದ ಮೂಲಕ ಮಹದೇವನಾಯಕನಿಗೆ ನೈರುತ್ಯ ಮೂಲೆಯಲ್ಲಿ ಎರಡೂವರೆ ಅಂಕಣ ಮನೆ ಮತ್ತು ದಾವಾ ಸ್ವತ್ತು ವಿಭಾಗದ ಮೂಲಕ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಮನೆ ಮತ್ತು ದಾವಾ ಸ್ವತ್ತನ್ನು ಮೂಗೂರು ಗ್ರಾಮದ ಸುಬ್ಬಪ್ಪನ ಮಗ ಲಿಂಗಪ್ಪನವರಿಗೆ ಸೇರಿತ್ತು ಎಂದರೆ ಸಾಕ್ಷಿಯು ಮನೆಯನ್ನು ಖರೀದಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

ದಿ.28.06.1941 ರಂದು 1 ನೇ ಪ್ರತಿವಾದಿಯ ಗಂಡನ ತಂದೆ ಮನಿಯನ ಲಿಂಗಯ್ಯ 4 ಕಂಬದ ಮನೆ ಮತ್ತು ದಾವಾ ಸ್ವತ್ತನ್ನು ಖರೀದಿ ಮಾಡಿದ್ದರು ಎಂದರೆ ಸಾಕ್ಷಿಯು ಮನೆಯನ್ನು ಖರೀದಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ವಿಚಾರ ಲಿಂಗಪ್ಪನ ಮಗ ಸುಬ್ಬಪ್ಪನವರಿಂದ ತಿಳಿದುಬಂದಿರುತ್ತದೆ. ಸದರಿ ಪತ್ರವನ್ನು ಓದಿಸಿ ತಿಳಿದುಕೊಂಡಿರುವುದಿಲ್ಲ. ದುರುದ್ದೇಶದಿಂದ ಸದರಿ ಪತ್ರದಲ್ಲಿ ಖಾಲಿ ಜಾಗ ಬರೆದಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಗಳ ಹಕ್ಕು ಮತ್ತು ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**